UNIVERSITY LIBRARY
Newspaper's Agri Clippings
For more information visit University Library Website
Web - uasbagrilibindia.org
E-mail- librarian@uasbangalore.edu.in
Monday
07-09-2026

ತೋಟಗಾರಿಕಾ ಕ್ಷೇತ್ರದ ಬೆಳವಣಿಗೆಗೆ ಉತ್ತೇಜನ ಅಗತ್ಯ



■ **ವಿಕ ಸುದ್ದಿಲೋಕ** ಬೆಂಗಳೂರು

ಸಂಶೋಧನೆ, ನಾವೀನ್ಯತೆ ಹಾಗೂ ಡಿಜಿಟಲೀಕರಣದ ಮೂಲಕ ತೋಟಗಾರಿಕಾ ಕ್ಷೇತ್ರದ ಬೆಳವಣಿಗೆಯನ್ನು ಮತ್ತಷ್ಟು ಉತ್ತೇಜಿಸುವ ಅಗತ್ಯವಿದೆ ಎಂದು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ಎಲೆಕ್ಟ್ರಾನಿಕ್ಸ್ ಮತ್ತು ಸಂವಹನ ವ್ಯವಸ್ಥೆಗಳ ಮಹಾನಿರ್ದೇಶಕ ಡಾ. ಬಿನಯ್ ಕೆ.ದಾಸ್ ವಿಜ್ಞಾನಿಗಳಿಗೆ ಕರೆ ನೀಡಿದರು.

ಭಾರತೀಯ ಕೃಷಿ ಸಂಶೋಧನಾ ಮಂಡಳಿ ಹಾಗೂ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ ಬೆಂಗಳೂರು ಘಟಕದ 60ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ''ಕೃಷಿ, ತಂತ್ರಜ್ಞಾನ ಮತ್ತು ದೇಶದ ಅಭಿವೃದ್ಧಿಯ ನಡುವೆ ನಿಕಟ ಸಂಬಂಧವಿದೆ. ರೈತರು ದೇಶವನ್ನು ಪೋಷಿಸುವ ಆಹಾರವನ್ನು ಉತ್ಪಾದಿಸುತ್ತಿದ್ದು, ದೇಶದ ಗಡಿಗಳನ್ನು ರಕ್ಷಿಸುವ ಸಶಸ್ತ್ರ ಪಡೆಗಳಷ್ಟೇ ರೈತರ ಪಾತ್ರವೂ ಮಹತ್ವದ್ದಾಗಿದೆ. ಮಣ್ಣು ಹಾಗೂ ಭೂಮಿಯನ್ನು ಜೀವಂತ ವ್ಯವಸ್ಥೆಗಳೆಂದು ಪರಿಗಣಿಸಿ ಸಂರಕ್ಷಿಸುವ ಅಗತ್ಯವಿದ್ದು, ಪರಿಸರ ಸುರಕ್ಷತೆ ಮತ್ತು ಸುಸ್ಥಿರತೆಗೆ ಹೆಚ್ಚಿನ ಆದ್ಯತೆ ನೀಡಬೇಕು,'' ಎಂದು ಕರೆ ನೀಡಿದರು.

337 ತಳಿಗಳು, 163 ತಂತ್ರಜ್ಞಾನಗಳ ಅಭಿವೃದ್ಧಿ: ಐಸಿಎಆರ್ - ಐಐಎಚ್‌ಆರ್ ನಿರ್ದೇಶಕ ಡಾ. ತುಷಾರ್ ಕಾಂತಿ ಬೆಹೆರಾ ಮಾತನಾಡಿ, ''ಸಂಸ್ಥೆಯು ಇದುವರೆಗೆ ತೋಟಗಾರಿಕಾ ಬೆಳೆಗಳ 337 ತಳಿಗಳು ಹಾಗೂ 163 ನೂತನ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಿ ಕೃಷಿ ಸಮುದಾಯಕ್ಕೆ ಮಹತ್ವದ ಕೊಡುಗೆ ನೀಡಿದೆ. ಸಂಸ್ಥೆಯ ತಂತ್ರಜ್ಞಾನ ವಾಣಿಜ್ಯೀಕರಣ ವ್ಯವಸ್ಥೆಯ ಮೂಲಕ ನಾನಾ ಕ್ಷೇತ್ರಗಳಲ್ಲಿ 255 ತಂತ್ರಜ್ಞಾನಗಳು, 771 ಗ್ರಾಹಕರು ಹಾಗೂ 1,681 ಪರವಾನಗಿಗಳನ್ನು ಹೊಂದಿದ್ದು, 156 ತಂತ್ರಜ್ಞಾನಗಳಿಗೆ ಪರವಾನಗಿ ನೀಡಲಾಗಿದೆ. ಇದರಿಂದ ಒಟ್ಟು ಸುಮಾರು 23.58 ಕೋಟಿ ರೂ. ಆದಾಯ ಸಂಗ್ರಹವಾಗಿದೆ,'' ಎಂದು ತಿಳಿಸಿದರು.

ನಬಾರ್ಡ್ ಕರ್ನಾಟಕ ಪ್ರಾದೇಶಿಕ ಕಚೇರಿಯ ಮುಖ್ಯ ಪ್ರಧಾನ ವ್ಯವಸ್ಥಾಪಕ ಡಾ. ಸುರೇಂದ್ರ ಬಾಬು, ಬಾಗಲಕೋಟೆಯ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ. ವಿಷ್ಣುವರ್ಧನ, ಐಐಎಚ್‌ಆರ್‌ನ ಪ್ರಧಾನ ವಿಜ್ಞಾನಿಗಳು ಸೇರಿದಂತೆ ಹಲವರು ಉಪಸ್ಥಿತರಿದ್ದರು. ರೈತರು, ವಿಜ್ಞಾನಿಗಳು ಮತ್ತು ವಿಭಾಗಗಳ ಮುಖ್ಯಸ್ಥರನ್ನು ಒಳಗೊಂಡ ರೈತ-ವಿಜ್ಞಾನಿಗಳ ಸಂವಾದವೂ ನಡೆಯಿತು. ಇದೇ ವೇಳೆ ಐಐಎಚ್‌ಆರ್ ಸಂಶೋಧಿಸಿರುವ ಹಣ್ಣು ತರಕಾರಿಗಳ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

47 ಸಾವಿರಕ್ಕೂ ಹೆಚ್ಚು ಫಲಾನುಭವಿಗಳು: 2025-26ನೇ ಸಾಲಿನಲ್ಲಿ ಐಸಿಎಆರ್ - ಐಐಎಚ್‌ಆರ್‌ನಲ್ಲಿ ಒಟ್ಟು 197 ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿದ್ದು, 11,075 ಮಂದಿ ಭಾಗವಹಿಸಿದ್ದಾರೆ. ವಿವಿಧ ವಿಶೇಷ ಯೋಜನೆಗಳಡಿ ಕೃಷಿ ಒಳಸಾಮಗ್ರಿಗಳ ವಿತರಣೆ ಮತ್ತು ಕ್ಷೇತ್ರ ಪ್ರದರ್ಶನಗಳ ಮೂಲಕ 47,672 ಫಲಾನುಭವಿಗಳಿಗೆ ಪ್ರಯೋಜನ ತಲುಪಿಸಲಾಗಿದೆ. ಬೀಜ ವಿತರಣೆ ಮತ್ತು ನರ್ಸರಿ ಚಟುವಟಿಕೆಗಳಿಂದ 2025-26ರಲ್ಲಿ ಸುಮಾರು 8.62 ಕೋಟಿ ರೂ.ಆದಾಯ ಗಳಸಲಾಗಿದೆ. ಆನ್‌ಲೈನ್ ಬೀಜ ಪೋರ್ಟಲ್‌ನಲ್ಲಿ 62,275 ರೈತರು ನೋಂದಾಯಿಸಿಕೊಂಡಿದ್ದು, 1,22,420 ವಹಿವಾಟುಗಳು ನಡೆದಿವೆ.

V-karnataka pg 05

ವಿಜಯವಾಣಿ ನಂ.1
vittasuggi@gmail.com
ವಿತ್ತವಾಣಿ
ಮನೆ ಮನೆಯ ಮನಿಮಾತು
ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI » BENGALURU
9 C
ಸೋಮವಾರ 7 ಸೆಪ್ಟೆಂಬರ್ 2026
7 SEPTEMBER 2026

ಕೊಡಗಿಗೆ ವಿದೇಶಿ ಕಾಫಿ!

ದೇಸಿ ತಳಿ ನಾಶವಾಗುವ ಸಾಧ್ಯತೆ ತಜ್ಞರಲ್ಲಿ ಆತಂಕ



ಕೊಡಗಿನ ನರ್ಸರಿಯೊಂದರಲ್ಲಿ ವಿದೇಶಿ ಮೂಲದ ತಳಿ ಎಂದು ಬಿಂಬಿಸಿ ಬೆಳೆಸಿರುವ ಕಾಫಿ ಗಿಡಗಳು.

ಸುನಿಲ್ ಪೊನ್ನೇಟಿ ಮಡಿಕೇರಿ

ಕಾಫಿ ನಾಡು ಕೊಡಗಿಗೆ ವಿದೇಶಿ ತಳಿಯ ಕಾಫಿ ಗಿಡಗಳು ಲಗ್ಗೆ ಇಡುತ್ತಿದ್ದು, ದೇಸಿ ತಳಿಗಳಿಗೆ ಹೊಡೆತ ಬೀಳುವ ಆತಂಕ ಎದುರಾಗಿದೆ. ಹೆಚ್ಚು ಲಾಭದ ಆಮಿಷ ಭವಿಷ್ಯದಲ್ಲಿ ಸ್ಥಳೀಯ ಕಾಫಿ ತೋಟಗಳಿಗೆ ಮಾರಕವಾಗಬಹುದು ಎಂದು ತಜ್ಞರು ಎಚ್ಚರಿಕೆ ನೀಡಿದ್ದಾರೆ.

ಕೆಲವು ಖಾಸಗಿ ನರ್ಸರಿಗಳ ಆಕರ್ಷಕ ಜಾಹೀರಾತುಗಳಿಗೆ ಮರುಳಾಗಿ ಬೆಳೆಗಾರರು ಅಪಾಯಕಾರಿ ತೀರ್ಮಾನ ತೆಗೆದುಕೊಳ್ಳುತ್ತಿರುವುದು ಆತಂಕ ಹುಟ್ಟಿಸಿದೆ. ವಿಯೆಟ್ನಾಂ, ಬ್ರೆಜಿಲ್ ದೇಶದ ಕಾಫಿ ಗಿಡಗಳು ತೋಟಗಳನ್ನು ಆವರಿಸಿಕೊಳ್ಳುತ್ತಿವೆ. ಮುಂಬರುವ ದಿನಗಳಲ್ಲಿ ಬೆಳೆಗೆ ದೊಡ್ಡ ಮಟ್ಟದ ಸಮಸ್ಯೆ ಉದ್ಭವವಾಗಬಹುದು ಎಂದು ತಜ್ಞರು ಎಚ್ಚರಿಕೆ ನೀಡಿದ್ದಾರೆ. ಅಲ್ಲದೆ, ಭಾರತೀಯ ಕಾಫಿ ಮಂಡಳಿ ಶಿಫಾರಸು ಮಾಡಿರುವ ತಳಿಗಳನ್ನು ಮಾತ್ರ ಬೆಳೆಯುವಂತೆ ಸಲಹೆ ನೀಡಿದ್ದಾರೆ.

ಮೋಹದ ಬಲೆಗೆ ಬಿದ್ದರೆ ಭವಿಷ್ಯ ಕತ್ತಲು: ವಿದೇಶಿ ತಳಿಗಳನ್ನು ಕೊಳ್ಳುವಂತೆ ಬೆಳೆಗಾರರನ್ನು ನೆಳೆಯಲು ಸ್ಥಳೀಯ ನರ್ಸರಿಗಳು ಮುಂದಾಗಿವೆ. ಗಿಡದಲ್ಲಿ ಎಲೆಗಳೇ ಕಾಣದಂತೆ ತುಂಬಿಕೊಂಡಿರುವ ಕಾಫಿ ಹಣ್ಣುಗಳು, ಕಣದಲ್ಲಿ ದೊಡ್ಡದಾದ ಕಾಫಿ ರಾಶಿ, ಬೆಳೆಗಾರನ ಐಷಾರಾಮಿ ಬದುಕು ಬಿಂಬಿಸುವ ಫೋಟೋಗಳನ್ನು ಅಲ್ಲಲ್ಲಿ ಅಳವಡಿಸಿ ಆಕರ್ಷಕ ಜಾಹೀರಾತು ಮೂಲಕ ನೆಳೆಯಲಾಗುತ್ತಿದೆ. ಖಾಸಗಿ ನರ್ಸರಿಗಳ ಮೋಹದ ಬಲೆಗೆ ಬಿದ್ದರೆ ಭವಿಷ್ಯದಲ್ಲಿ ಆತ ಮಾತ್ರವಲ್ಲ, ಸುತ್ತಮುತ್ತಲಿನ ತೋಟಗಳೂ ಪರಿಹಾರ ಕಾಣದಂತಹ ಸಮಸ್ಯೆ ಎದುರಿಸಬೇಕಾಗುವ ಸಾಧ್ಯತೆಗಳಿವೆ ಎಂದು ತಜ್ಞರು ಎಚ್ಚರಿಸಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಒಂದನ್ನೊಂದು ಮೀರಿಸುವ ವಿದೇಶಿ ತಳಿಗಳ ಸಸಿಗಳನ್ನು ಅನಧಿಕೃತವಾಗಿ ಮಾರಾಟ ಮಾಡುವ ದಂಧೆ ಹೆಚ್ಚಾಗಿದೆ. ಕೆಲ ನರ್ಸರಿಗಳು ವಿಯೆಟ್ನಾಂ ಮೂಲದ ಟಿಎಸ್ 5, ಟಿಆರ್ 9, ಟಿಆರ್ 11 ಹೆಸರಿನ ತಳಿಗಳು ಮತ್ತು ಬ್ರೆಜಿಲ್, ಕೊಲಂಬಿಯಾ ಮೂಲದ ಕಾಫಿ ಗಿಡಗಳನ್ನು ಲಾಭದಾಯಕ ಬೆಳೆ ಎಂದು ಬಿಂಬಿಸಿ ಪ್ರಚಾರ ಮಾಡುತ್ತಿವೆ. ಆದರೆ, ಈ ತಳಿಗಳ ವೈಜ್ಞಾನಿಕ ಸತ್ಯಾಸತ್ಯತೆ, ಇಳುವರಿ ಸಾಮರ್ಥ್ಯ ಅಥವಾ ಸ್ಥಳೀಯ ವಾತಾವರಣಕ್ಕೆ ಹೊಂದಿಕೊಳ್ಳುವ ಬಗ್ಗೆ ಅಧಿಕೃತ ಮಾಹಿತಿಯನ್ನು ಬೆಳೆಗಾರರಿಗೆ ಕೊಡುತ್ತಿಲ್ಲ.

ಅಪಾಯದ ಆತಂಕ

ವಿದೇಶಿ ತಳಿಗಳನ್ನು ಭಾರತಕ್ಕೆ ತಮದು ಮಾಡಿಕೊಳ್ಳಬೇಕಾದರೆ ಸಾಕಷ್ಟು ನಿಯಮಗಳಿವೆ. ಆದರೆ, ಖಾಸಗಿ ನರ್ಸರಿಗಳು ಈ ನಿಯಮ ಪಾಲಿಸುತ್ತಿಲ್ಲ ಎಂಬ ದೂರುಗಳಿವೆ. ಸೂಕ್ತ ಆಮದು ಪರವಾನಗಿ ಮತ್ತು ಕ್ವಾರಂಟೈನ್ ನಿಯಮಗಳನ್ನು ಪಾಲಿಸದೆ ತರಲಾಗುವ ತಳಿಗಳು ಭಾರತದ ಕಾಫಿ ತೋಟಗಳಿಗೆ ಮಾರಕವಾಗಬಹುದು ಎನ್ನುವ ಎಚ್ಚರಿಕೆ ನೀಡಿದ್ದಾರೆ. ವಿದೇಶಿ ತಳಿಗಳಿಂದ ಹೊಸ ಕೀಟ ಮತ್ತು ರೋಗಗಳು ಭಾರತಕ್ಕೆ ಪ್ರವೇಶಿಸಲು ದಾರಿ ಮಾಡಿಕೊಟ್ಟಂತಾಗುತ್ತದೆ. ದೇಶದಲ್ಲಿ ಈವರೆಗೆ ಕಾಣದ ಭಯಾನಕ ಕೀಟಗಳು, ರೋಗಕಾರಕ ಜೀವಿಗಳು ಹಾಗೂ ನಿಯಂತ್ರಿಸಲಾಗದ ಅಪಾಯಕಾರಿ ಕಳೆಗಳು ಸ್ಥಳೀಯ ತೋಟಗಳಿಗೆ ಲಗ್ಗೆ ಇಡುವ ಸಾಧ್ಯತೆ ಹೆಚ್ಚಿದೆ ಎಂದು ತಜ್ಞರು ಆತಂಕ ವ್ಯಕ್ತಪಡಿಸಿದ್ದಾರೆ. ದೇಶದ ಜೈವಿಕ ಸುರಕ್ಷತೆಯನ್ನು ಕಾಯ್ದುಕೊಳ್ಳಲು ಭಾರತ ಸರ್ಕಾರ ಕಟ್ಟುನಿಟ್ಟಿನ ಕ್ವಾರಂಟೈನ್ ನಿಯಮಗಳನ್ನು ಜಾರಿಗೊಳಿಸಿದೆ. ಈ ನಿಯಮಗಳನ್ನು ಗಾಳಿಗೆ ತೂರಿ ಸಸಿಗಳನ್ನು ಸಾಗಿಸುವುದು ಕಾನೂನುಬಾಹಿರ. ವಿದೇಶಿ ಕಾಫಿ ತಳಿಗಳನ್ನು ಬೆಳೆಸಲು ಅಥವಾ ಮಾರಾಟ ಮಾಡಲು ಖಾಸಗಿ ಸಸಿಮಡಿಗಳಿಗೆ ಅಥವಾ ಖಾಸಗಿ ತೋಟಗಳಿಗೆ ಕಾಫಿ ಮಂಡಳಿ ಇಲ್ಲಿಯವರೆಗೆ ಮಾನ್ಯತೆ ನೀಡಿಲ್ಲ.



ಕಾಫಿ ಮಂಡಳಿ ತಿಫಾರಸು ಮಾಡುವ ತಳಿ ಹೊರತುಪಡಿಸಿ ಬೇರೆ ಗಿಡಗಳನ್ನು ನೆಡಬಾರದು. ತಜ್ಞರು ಹಲವು ವರ್ಷ ಸಂಶೋಧನೆ ಮಾಡಿ ಸ್ಥಳೀಯ ಹವಾಮಾನ, ಭೌಗೋಳಿಕ ಪರಿಸ್ಥಿತಿ, ಕೀಟ, ರೋಗಭಾದೆ ಸಹಿಸಿಕೊಳ್ಳುವ ಸಾಮರ್ಥ್ಯದ ಬಗ್ಗೆ ಅಧ್ಯಯನ ನಡೆಸಿ ತಳಿಗಳನ್ನು ರೂಪಿಸಿರುತ್ತಾರೆ. ಇದನ್ನು ಹೊರತುಪಡಿಸಿ ವಿದೇಶಿ ತಳಿಗಳನ್ನು ಬೆಳೆಯಲು ಮುಂದಾದರೆ ಸಮಸ್ಯೆಗಳನ್ನು ಎದುರಿಸಬೇಕಾಗಬಹುದು.

| ಡಾ.ವೀರೇಂದ್ರ ಕುಮಾರ್ ಸ್ಸ ಸಂರಕ್ಷಣಾ ತಜ್ಞ, ಕೃಷಿ ವಿಜ್ಞಾನ ಕೇಂದ್ರ, ಗೋಣಿಕೊಪ್ಪಲು

ಕಾಫಿ ಮಂಡಳಿ ಮನವಿ

ಕಾಫಿ ಕೃಷಿಯನ್ನು ಆರ್ಥಿಕವಾಗಿ ಲಾಭದಾಯಕ, ಸುಸ್ಥಿರಗೊಳಿಸಲು ಭಾರತೀಯ ಕಾಫಿ ಮಂಡಳಿಯ ಕೇಂದ್ರೀಯ ಕಾಫಿ ಸಂಶೋಧನಾ ಸಂಸ್ಥೆ ನಿರಂತರ ಸಂಶೋಧನೆ ನಡೆಸುತ್ತಿದೆ. ಯಾವುದೇ ತಳಿಯನ್ನು ಬೆಳೆಯಲು ಬೆಳೆಗಾರರಿಗೆ ತಿಫಾರಸು ಮಾಡುವ ಮುನ್ನ ವಿವಿಧ ಕಾಫಿ ಬೆಳೆಯುವ ಪ್ರದೇಶಗಳಲ್ಲಿ ಸುದೀರ್ಘ ಕಾಲ ಬಹು-ಸ್ಥಳೀಯ ಪ್ರಯೋಗಗಳನ್ನು ನಡೆಸಲಾಗುತ್ತದೆ. ಮಣ್ಣಿನ ಗುಣಧರ್ಮ, ಹವಾಮಾನ ಮತ್ತು ಕೀಟ ನಿರೋಧಕ ಶಕ್ತಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರವೇ ಪ್ರಮಾಣೀಕೃತ ತಳಿ, ಕ್ಲೋನ್‌ಗಳು ಮತ್ತು ಮಿಶ್ರ ತಳಿಗಳನ್ನು ಬಿಡುಗಡೆ ಮಾಡಲಾಗುತ್ತದೆ. ಸ್ಥಳೀಯ ಕಾಫಿ ಬೆಳೆಯಲ್ಲಿ ಸುಸ್ಥಿರತೆ ಕಾಪಾಡಿಕೊಳ್ಳಲು,ತೋಟಗಳನ್ನು ಉಳಿಸಿಕೊಳ್ಳಲು ವಿದೇಶಿ ತಳಿಗಳನ್ನು ನಾಟಿ ಮಾಡದಂತೆ ಬೆಳೆಗಾರರಲ್ಲಿ ತಜ್ಞರು ಮನವಿ ಮಾಡಿದ್ದಾರೆ. ಕಾಫಿ ಬೆಳೆಗಾರರ ಸಂಘಗಳು, ತೋಟದ ಮಾಲೀಕರು ಹಾಗೂ ಕೃಷಿಕರು ಅನಧಿಕೃತ ಮಾರಾಟದ ಕುರಿತು ಜಾಗೃತರಾಗಿರಬೇಕು. ಹೊಸ ತಳಿಯ ಸಸಿಗಳನ್ನು ಖರೀದಿಸುವ ಮುನ್ನ ಕಾಫಿ ಮಂಡಳಿ ವಿಜ್ಞಾನಿಗಳು ಅಥವಾ ಸ್ಥಳೀಯ ವಿಸ್ತರಣಾಧಿಕಾರಿಗಳನ್ನು ಸಂಪರ್ಕಿಸಿ ಸತ್ಯಾಸತ್ಯತೆ ಖಚಿತಪಡಿಸಿಕೊಳ್ಳಬೇಕು ಎಂದು ಭಾರತೀಯ ಕಾಫಿ ಮಂಡಳಿ ಬೆಳೆಗಾರರಲ್ಲಿ ಮನವಿ ಮಾಡಿದೆ.

ಉದ್ಯಮದ ಸುಸ್ಥಿರತೆಗೆ ಮಾರಕ

ವಿದೇಶಿ ತಳಿಗಳನ್ನು ನೆಡುವುದು ಭವಿಷ್ಯದಲ್ಲಿ ಆರ್ಥಿಕ ನಷ್ಟಕ್ಕೆ ಕಾರಣವಾಗಬಹುದು. ಇಡೀ ಭಾರತೀಯ ಕಾಫಿ ಉದ್ಯಮದ ಸುಸ್ಥಿರತೆಗೆ ಮಾರಕವಾಗಿ ಪರಿಣಮಿಸಬಹುದು. ಭಾರತೀಯ ಹವಾಮಾನದಲ್ಲಿ ಈ ತಳಿಗಳ ಯಶಸ್ಸು ಅಥವಾ ಇಳುವರಿ ಸಾಮರ್ಥ್ಯವನ್ನು ಕಾಫಿ ಮಂಡಳಿ ಎಲ್ಲಿಯೂ ದೃಢೀಕರಿಸಿಲ್ಲ. ದೇಶದಲ್ಲಿ ಕಾಫಿಯನ್ನು ನೆರಳಿನಲ್ಲಿ ಬೆಳೆಸಲಾಗುತ್ತದೆ. ವಿದೇಶದಲ್ಲಿ ಬಿಸಿಲಿನಲ್ಲಿ ಬೆಳೆಯಲಾಗುತ್ತದೆ. ಇಂತಹ ವೈರುಧ್ಯಗಳು ತಳಿಯ ಕಾಫಿಯಿಂದಾಗಿ ಸ್ಥಳೀಯ ವ್ಯವಸ್ಥೆಗೆ ಮಾರಕವಾಗುವ ಆತಂಕ ಎದುರಾಗಿದೆ.

ಕಾಫಿ ಮಂಡಳಿ ಮನವಿ

ಕಾಫಿ ಕೃಷಿಯನ್ನು ಆರ್ಥಿಕವಾಗಿ ಲಾಭದಾಯಕ, ಸುಸ್ಥಿರಗೊಳಿಸಲು ಭಾರತೀಯ ಕಾಫಿ ಮಂಡಳಿಯ ಕೇಂದ್ರೀಯ ಕಾಫಿ ಸಂಶೋಧನಾ ಸಂಸ್ಥೆ ನಿರಂತರ ಸಂಶೋಧನೆ ನಡೆಸುತ್ತಿದೆ. ಯಾವುದೇ ತಳಿಯನ್ನು ಬೆಳೆಯಲು ಬೆಳೆಗಾರರಿಗೆ ತಿಫಾರಸು ಮಾಡುವ ಮುನ್ನ ವಿವಿಧ ಕಾಫಿ ಬೆಳೆಯುವ ಪ್ರದೇಶಗಳಲ್ಲಿ ಸುದೀರ್ಘ ಕಾಲ ಬಹು-ಸ್ಥಳೀಯ ಪ್ರಯೋಗಗಳನ್ನು ನಡೆಸಲಾಗುತ್ತದೆ. ಮಣ್ಣಿನ ಗುಣಧರ್ಮ, ಹವಾಮಾನ ಮತ್ತು ಕೀಟ ನಿರೋಧಕ ಶಕ್ತಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರವೇ ಪ್ರಮಾಣೀಕೃತ ತಳಿ, ಕ್ಲೋನ್‌ಗಳು ಮತ್ತು ಮಿಶ್ರ ತಳಿಗಳನ್ನು ಬಿಡುಗಡೆ ಮಾಡಲಾಗುತ್ತದೆ. ಸ್ಥಳೀಯ ಕಾಫಿ ಬೆಳೆಯಲ್ಲಿ ಸುಸ್ಥಿರತೆ ಕಾಪಾಡಿಕೊಳ್ಳಲು,ತೋಟಗಳನ್ನು ಉಳಿಸಿಕೊಳ್ಳಲು ವಿದೇಶಿ ತಳಿಗಳನ್ನು ನಾಟಿ ಮಾಡದಂತೆ ಬೆಳೆಗಾರರಲ್ಲಿ ತಜ್ಞರು ಮನವಿ ಮಾಡಿದ್ದಾರೆ. ಕಾಫಿ ಬೆಳೆಗಾರರ ಸಂಘಗಳು, ತೋಟದ ಮಾಲೀಕರು ಹಾಗೂ ಕೃಷಿಕರು ಅನಧಿಕೃತ ಮಾರಾಟದ ಕುರಿತು ಜಾಗೃತರಾಗಿರಬೇಕು. ಹೊಸ ತಳಿಯ ಸಸಿಗಳನ್ನು ಖರೀದಿಸುವ ಮುನ್ನ ಕಾಫಿ ಮಂಡಳಿ ವಿಜ್ಞಾನಿಗಳು ಅಥವಾ ಸ್ಥಳೀಯ ವಿಸ್ತರಣಾಧಿಕಾರಿಗಳನ್ನು ಸಂಪರ್ಕಿಸಿ ಸತ್ಯಾಸತ್ಯತೆ ಖಚಿತಪಡಿಸಿಕೊಳ್ಳಬೇಕು ಎಂದು ಭಾರತೀಯ ಕಾಫಿ ಮಂಡಳಿ ಬೆಳೆಗಾರರಲ್ಲಿ ಮನವಿ ಮಾಡಿದೆ.

ಆರೇಬಿಕಾ, ರೊಬಸ್ಟಾಗೆ ಹಾನಿ

ಸ್ಥಳೀಯವಾಗಿ ವಿದೇಶಿ ತಳಿ ಬೆಳೆಯುವುದರಿಂದ ಸ್ಥಳೀಯ ಜೀವವೈವಿಧ್ಯದ ಮೇಲೆ ಕೆಟ್ಟ ಪರಿಣಾಮ ಬೀರಬಹುದು. ವಿದೇಶಿ ತಳಿಗಳನ್ನು ಉಳಿವಿಗೆ ಹೆಚ್ಚಿನ ಪ್ರಮಾಣದ ಕ್ರಿಮಿನಾಶಕಗಳು, ರಾಸಾಯನಿಕ ಮತ್ತು ವಿಶೇಷ ಆರೈಕೆ ಅಗತ್ಯವಿರುತ್ತದೆ. ಇದರಿಂದ ಕೃಷಿ ವೆಚ್ಚ ಹೆಚ್ಚಾಗುತ್ತದೆ. ವಿದೇಶಿ ಗಿಡಗಳ ಪರಾಗಸ್ಪರ್ಶದಿಂದ ಸುತ್ತ ಮುತ್ತಲಿನ ಸ್ಥಳೀಯ ತಳಿಗಳಿಗೆ ಹಾನಿಯಾಗಲಿದೆ. ಭಾರತೀಯ ಆರೇಬಿಕಾ ಮತ್ತು ರೊಬಸ್ಟಾ ಕಾಫಿಗೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಉತ್ತಮ ಬೇಡಿಕೆ ಇದೆ. ವಿದೇಶಿ ತಳಿಗಳನ್ನು ಮಿಶ್ರಣ ಮಾಡುವುದರಿಂದ ಸೂಕ್ತ ಬೆಲೆ ಸಿಗದಿರಬಹುದು.

Vijayavani pg 12

ತೋಟಗಾರಿಕೆಯಲ್ಲಿ ಎಫ್‌ಡಿಐ ಸರಳೀಕರಣಕ್ಕೆ ಚಿಂತನೆ

Prajayavani pg 07

ನವದೆಹಲಿ (ಪಿಟಿಐ): ತೋಟಗಾರಿಕಾ ವಲಯದ ವ್ಯಾಪ್ತಿಗೆ ಹೆಚ್ಚಿನ ಬೆಳೆಗಳನ್ನು ತಂದು, ಈ ವಲಯಕ್ಕೆ ಸಂಬಂಧಿಸಿದ ವಿದೇಶಿ ನೇರ ಬಂಡವಾಳ ಹೂಡಿಕೆ (ಎಫ್‌ಡಿಐ) ನಿಯಮಗಳನ್ನು ಸಡಿಲಿಸುವ ಬಗ್ಗೆ ಕೇಂದ್ರ ಸರ್ಕಾರ ಪರಿಶೀಲನೆ ನಡೆಸಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯವು ಈ ವಿಚಾರವಾಗಿ ಪಾಲುದಾರರ ಜೊತೆ ಸಮಾಲೋಚನೆ ನಡೆಸುತ್ತಿದೆ. 'ಬಾಳೆ ತೋಟದಂತಹ ವಲಯಗಳಲ್ಲಿ ಎಫ್‌ಡಿಐ ಸರಳೀಕರಣಕ್ಕೆ ನಾವು ಆಲೋಚನೆ ನಡೆಸಿದ್ದೇವೆ' ಎಂದು ಅಧಿಕಾರಿ ಮಾಹಿತಿ ನೀಡಿದ್ದಾರೆ.

ಈಗಿರುವ ನಿಯಮಗಳ ಅನ್ವಯ, ಚಹಾ ತೋಟಗಳು ಸೇರಿದಂತೆ ಚಹಾ ವಲಯದಲ್ಲಿ ಸರ್ಕಾರದ ಪೂರ್ವಾನುಮತಿ ಇಲ್ಲದೆ ಶೇ 100ರಷ್ಟು ಎಫ್‌ಡಿಐಗೆ ಅನುಮತಿ ಇದೆ. ಅಲ್ಲದೆ, ಕಾಫಿ ತೋಟ, ರಬ್ಬರ್, ಏಲಕ್ಕಿ, ತಾಳೆ ಮತ್ತು ಆಲಿವ್ ತೋಟಗಳಲ್ಲಿ ಕೂಡ ಶೇ 100ರಷ್ಟು ಎಫ್‌ಡಿಐಗೆ ಅವಕಾಶವಿದೆ.

ಆದರೆ ಇತರ ಯಾವುದೇ ತೋಟಗಾರಿಕಾ ಬೆಳೆಗಳಿಗೆ ಸಂಬಂಧಿಸಿದಂತೆ ಎಫ್‌ಡಿಐಗೆ ಅವಕಾಶ ನೀಡಿಲ್ಲ. ಅಂದಾಜಿನ ಪ್ರಕಾರವು ಭಾರತವು ಜಗತ್ತಿನಲ್ಲಿ ಅತಿಹೆಚ್ಚು ಪ್ರಮಾಣದಲ್ಲಿ ಬಾಳೆಹಣ್ಣು ಬೆಳೆಯುತ್ತಿದೆ. ಇಲ್ಲಿ ವರ್ಷಕ್ಕೆ 3 ಕೋಟಿ ಟನ್‌ಗೂ ಹೆಚ್ಚು ಬಾಳೆಹಣ್ಣು ಬೆಳೆಯಲಾಗುತ್ತಿದೆ.

ಹೀಗಿದ್ದರೂ, ಜಾಗತಿಕ ಬಾಳೆಹಣ್ಣು ರಫ್ತು ವಹಿವಾಟಿನಲ್ಲಿ ಭಾರತದ ಪಾಲು ಶೇ 1ಕ್ಕಿಂತ ಕಡಿಮೆ ಇದೆ. ಭಾರತವು ಬಾಳೆಹಣ್ಣನ್ನು ಇರಾನ್, ಇರಾಕ್, ಯುಎಇ, ಒಮಾನ್, ಉಜ್ಬೇಕಿಸ್ತಾನ, ಸೌದಿ ಅರೇಬಿಯಾ, ನೇಪಾಳ, ಕತಾರ್, ಕುವೈತ್, ಬಹರೇನ್, ಅಫ್ಘಾನಿಸ್ತಾನ, ಮಾಲ್ದೀವ್ಸ್‌ಗೆ ಹೆಚ್ಚಾಗಿ ರಫ್ತು ಮಾಡುತ್ತಿದೆ.

ಅಮೆರಿಕ, ರಷ್ಯಾ, ಜಪಾನ್, ಚೀನಾ, ಜರ್ಮನಿ, ನೆದರ್ಲೆಂಡ್ಸ್, ಬ್ರಿಟನ್ ಮತ್ತು ಫ್ರಾನ್ಸ್‌ಗೆ ಹೆಚ್ಚಿನ ಪ್ರಮಾಣದಲ್ಲಿ ರಫ್ತು ಮಾಡಲು ಅವಕಾಶ ಇದೆ.

ಸವಾಲುಗಳಿಗೆ 'ರೈತ ಕಂಪನಿ'ಗಳು ತತ್ತರ

ರೈತರಿಗಾಗಿ ರೈತರೇ ಸ್ಥಾಪಿಸಿರುವ ಕಂಪನಿಗಳು ಅಸ್ತಿತ್ವ ಉಳಿಸಿಕೊಳ್ಳಲು ಹೆಣಗುತ್ತಿವೆ. ತೆರಿಗೆ, ನೋಂದಣಿ ಶುಲ್ಕ, ಇತ್ಯಾದಿ ಚಕ್ರವ್ಯೂಹದಲ್ಲಿ ಸಿಲುಕಿ ಏದುಸಿರುಬಿಡುತ್ತಿವೆ.

• ಆನಂದತೀರ್ಥ ಪ್ಯಾಟಿ

ರೈತರು ಸಾಮುದಾಯಿಕ ನೆಲೆಯಲ್ಲಿ ಒಗ್ಗೂಡಿ ಮಾರುಕಟ್ಟೆಯಲ್ಲಿ ಯಶಸ್ಸು ಪಡೆಯುವ ಉದ್ದೇಶದಿಂದ ರೂಪುಗೊಂಡ 'ರೈತ ಉತ್ಪಾದಕ ಸಂಸ್ಥೆ'ಗಳು (ಎಫ್‌ಪಿಒ) ಮಹಿವಾಟು ನಿರ್ವಹಣೆಯಲ್ಲಿ ಏದುಸಿರು ಬಿಡುತ್ತಿವೆ. ಅತಿ ಉತ್ಸಾಹದಿಂದ ಸ್ಥಾಪನೆಗೊಂಡ 'ಎಫ್‌ಪಿಒ'ಗಳು ಪ್ರಸ್ತುತ ಮೂಲ ಉದ್ದೇಶದಿಂದ ದೂರವಾಗಿ, ಮೂರನೇ ವ್ಯಕ್ತಿಗಳ ಉತ್ಪನ್ನಗಳನ್ನು ಮಾರಾಟ ಮಾಡುತ್ತಿರುವುದು ಅವುಗಳ ಕಾರ್ಯವೈಖರಿ ಮೇಲೆ ಅಡ್ಡಪರಿಣಾಮ ಬೀರಿದೆ.

ಕೃಷಿ ಪ್ರಧಾನ ದೇಶದಲ್ಲಿ ರೈತನು ಉತ್ಪಾದನೆಗಷ್ಟೇ ಸೀಮಿತವಾಗಿ, ಮಾರುಕಟ್ಟೆಯು ದಲ್ಲಾಳಿಗಳ ಕಪಿಮುಷ್ಟಿಗೆ ಸಿಲುಕಿದೆ. ಇದನ್ನು ತಪ್ಪಿಸಿ, ರೈತರು ಒಗ್ಗೂಡಿ ಕಂಪನಿ ಸ್ವರೂಪದಲ್ಲಿ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಅನುವು ಮಾಡಿಕೊಡುವ ದೃಷ್ಟಿಯಿಂದ ಸರ್ಕಾರಗಳು ಎಫ್‌ಪಿಒ ಸ್ಥಾಪಿಸಲು ಅವಕಾಶ ನೀಡಿವೆ. ಇದೊಂದು ಬಗೆಯಲ್ಲಿ ಸೊಸೈಟಿ ಹಾಗೂ ಕಂಪನಿ ಕಾರ್ಯವೈಖರಿಯ ಹೈಬ್ರಿಡ್ ಮಾದರಿ. ಕಂಪನಿಗಳ ಕಾಯ್ದೆ ಪ್ರಕಾರ ನೋಂದಾಯಿತವಾದರೆ ಅವುಗಳನ್ನು 'ರೈತ ಉತ್ಪಾದಕ ಕಂಪನಿ' (ಎಫ್‌ಪಿಸಿ) ಎಂದೂ, ಸೊಸೈಟಿ ಕಾಯ್ದೆ ಪ್ರಕಾರ ನೋಂದಾಯಿಸಿದರೆ ಎಫ್‌ಪಿಒ ಎಂದೂ ಪರಿಗಣಿಸಲಾಗುತ್ತಿದೆ. ಒಟ್ಟಾರೆಯಾಗಿ 'ರೈತನೇ ಮಾಲೀಕ; ವೃತ್ತಿಪರರಿಂದ ನಿರ್ವಹಣೆ' ಎಂಬುದು ರೈತ ಉತ್ಪಾದಕ ಸಂಸ್ಥೆ ಅಥವಾ ರೈತ ಕಂಪನಿಗಳ ಧ್ಯೇಯ.

ರೈತನಿಂದ ಖರೀದಿಸುವ ಉತ್ಪನ್ನ ಅಂತಿಮವಾಗಿ ಗ್ರಾಹಕನಿಗೆ ತಲಪುವಾಗ ಅದರ ದರ ದುಪ್ಪಟ್ಟು ಆಗಿರುತ್ತದೆ. ಇದಕ್ಕೆ ಹಲವು ಹಂತಗಳ ಪ್ರಕ್ರಿಯೆ ಕಾರಣವಾಗಿದೆ. ಆ ಪ್ರಕ್ರಿಯೆಯನ್ನು ಖಾಸಗಿ ಕಂಪನಿಗಳ ಬದಲಿಗೆ 'ರೈತ ಕಂಪನಿ'ಗಳೇ ನಿರ್ವಹಿಸಿದರೆ ಉತ್ಪಾದಕರಿಗೆ ಅಧಿಕ ಆದಾಯ ಸಿಕ್ಕೀತು. ಇಂಥ ಉದಾತ್ತ ಉದ್ದೇಶಗಳನ್ನು ಇಟ್ಟುಕೊಂಡು ರೂಪಿಸಲಾದ ಎಫ್‌ಪಿಒ ಮಾದರಿಯು ಈಗ ತರಹೇವಾರಿ ಅಡ್ಡಿ ಆತಂಕ ಎದುರಿಸುತ್ತಿದೆ. ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಾದ 10,000 ಎಫ್‌ಪಿಒ ಸ್ಥಾಪನೆಯು, ರೈತ ಕಂಪನಿ ಶುರುವಾಗುವಲ್ಲಿ ಹಿಚ್ಚು ನೆರವಾಯಿತು. ಆದರೆ ಅದರ ಸಮರ್ಪಕ ಮುಂದುವರಿಕೆಯೇ ಈಗ ಅನುಮಾನ ಎಂಬಂತಾಗಿದೆ.



ಕಂಪನಿಗಳ ಮಹಿವಾಟಿಗೆ ಬಂಡವಾಳ ಬೇಕು. ಅದನ್ನು ಷೇರುದಾರರಿಂದ (ರೈತರು) ಪಡೆಯಲಾಗುತ್ತದೆ. ಆದರೆ ಅದು ಯಾವುದಕ್ಕೂ ಸಾಲದು. ಕೊಯ್ಲಿನ ಸಂದರ್ಭದಲ್ಲಿ ಉತ್ಪನ್ನ ಖರೀದಿಗೆ ಅಗತ್ಯ ಹಣ ಲಭ್ಯವಾಗದೆ, ಬ್ಯಾಂಕಿನ ಮೊರೆ ಹೋದರೆ ಅಲ್ಲಿ ಖಂಡಿತವಾಗಿಯೂ ನಿರಾಶೆ! ಹಿಂದೆ ಯಾವುದೇ ಮಹಿವಾಟು ನಡೆಸಿರದ ಸಂಸ್ಥೆಗಳನ್ನು ಬ್ಯಾಂಕುಗಳು ನಂಬುವುದೇ ಇಲ್ಲ. ಷೇರುದಾರ ರೈತರಿಂದ ಪಡೆದ ಕಿರು ಪ್ರಮಾಣದ ಬಂಡವಾಳದಲ್ಲಿ ಕಂಪನಿ ಏನು ತಾನೇ ಮಾಡೀತು? ಹಾಗೂ ಹೀಗೂ ಮಾಡಿ ಸ್ಥಿತಿವಂತರಿಂದ ಹೆಚ್ಚು ಬಂಡವಾಳ ಪಡೆಯಲು ಮುಂದಾದರೆ, ನಿಗದಿತ ಸಂಖ್ಯೆಯ ರೈತರಿಂದ ಷೇರು ಪಡೆದರೆ ಮಾತ್ರ ಸಮಪ್ರಮಾಣದ ನೆರವು (ಮ್ಯಾಚಿಂಗ್ ಗ್ರ್ಯಾಂಟ್) ಕೊಡುವ ಸರ್ಕಾರದ ನಿಬಂಧನೆಯು ಮುಂದಿನ ಪ್ರಕ್ರಿಯೆಗೆ ಅಡ್ಡಿಯಾಗುತ್ತದೆ. 'ಪರ್ಯಾಯ' ದಾರಿಗಳನ್ನು ಹುಡುಕಿ ಕಂಪನಿ ಶುರು ಮಾಡಿದರೆ ಧುತ್ತೆಂದು ಸವಾಲುಗಳು ಎದುರಾಗುತ್ತವೆ.

ರೈತ ಕಂಪನಿಗಳಿಗೆ ಮೊದಲೆಲ್ಲ ತೆರಿಗೆ ವಿನಾಯಿತಿ ಇತ್ತು; ಈಗ ಎರಡು ವರ್ಷಗಳಿಂದ ಅದನ್ನು ತೆಗೆದುಹಾಕಲಾಗಿದೆ. ರೈತರಿಗಾಗಿ ರೈತರೇ ಕಟ್ಟಿಕೊಂಡ ಕಂಪನಿಗೆ ತೆರಿಗೆ ವಿಧಿಸುವುದು ಎಂಥ ನ್ಯಾಯ? ಇದು ಕೇಂದ್ರ ಸರ್ಕಾರದ ಕ್ರಮವಾದರೆ, ಎಪಿಎಂಸಿ ಸೌಲಭ್ಯ ಬಳಸಿಕೊಳ್ಳದೇ ಹೋದರೂ ರಾಜ್ಯ ಸರ್ಕಾರ ಎಪಿಎಂಸಿ ಸೆಸ್ ವಸೂಲಿ ಮಾಡುತ್ತಿದೆ! ಎಫ್‌ಪಿಒ ಲಾಭ ಪಡೆಯುವುದೇ ಮಹಿವಾಟು ಶುರುವಾದ ಏಳೆಂಟು ವರ್ಷಗಳ ನಂತರದಲ್ಲಿ. ಅಷ್ಟರಲ್ಲಿ ಬಗೆಬಗೆಯ ನೋಂದಣಿ ಶುಲ್ಕ, ತೆರಿಗೆ, ರೈತರಿಗೆ ಉತ್ತಮ ಬೆಲೆ ನೀಡಿ, ಮಹಿವಾಟು ನಡೆಸಿ, ಆಮೇಲೆ ಪಡೆದ ಲಾಭಕ್ಕೆ ಕಂಪನಿಗಳು ತೆರಿಗೆ ತೆರಬೇಕು. ಇಂಥ ಕಷ್ಟ-ಕೋಟಲೆ ಎದುರಿಸಿ ಯಾವ ರೈತ ಕಂಪನಿ ಬದುಕೀತು?

ಇದಕ್ಕಾಗಿ ಹಲವು ರೈತ ಕಂಪನಿಗಳು ಕೃಷಿ ಉತ್ಪನ್ನದ ಬದಲಿಗೆ ರಸಗೊಬ್ಬರ, ಟಾರ್ಪಾಲಿನ್ ಮಾರಾಟ ನಡೆಸುತ್ತಿವೆ. ಇದೇ ಇವುಗಳ ಮಹಿವಾಟು ಆದಂತಾಗಿದೆ. ಕಷ್ಟಪಟ್ಟು ಮಹಿವಾಟು ನಡೆಸುವ ಕಂಪನಿಗಳು ವಾರ್ಷಿಕ ಮಹಾಸಭೆ, ತೆರಿಗೆ, ಲೆಕ್ಕ ಪರಿಶೋಧನೆಯಂಥ ಹಣಕಾಸು ನಿರ್ವಹಣೆಯಲ್ಲಿ ಹೈರಾಣಾಗುತ್ತವೆ. ಇದಂತೂ, ಮುಂದೆ ಭಾರೀ ದಂಡ ತೆರುವ ಸಾಧ್ಯತೆಯ ಆತಂಕದ ಸಂಗತಿ.

ಸರ್ಕಾರ, ಸಂಸ್ಥೆಗಳ ಉತ್ತೇಜನದಿಂದ ಪ್ರತಿ ಜಿಲ್ಲೆಯಲ್ಲಿ ಹತ್ತಾರು ಎಫ್‌ಪಿಒ ಶುರುವಾಗಿವೆ. ಆದರೆ ಅವುಗಳನ್ನು ನಿರ್ವಹಿಸಬೇಕಾದ ಆಡಳಿತ ಮಂಡಳಿಯ ಸಾಮರ್ಥ್ಯ ವೃದ್ಧಿ ಕೆಲಸ ನಡೆದೇ ಇಲ್ಲ. ರೈತರ ಉತ್ಪನ್ನಕ್ಕೆ ಸೂಕ್ತ ಬೆಲೆ ಕೊಡುವುದು, ಸಂಸ್ಕರಣೆ, ಶೇಖರಣೆ ಹಾಗೂ ಮೌಲ್ಯವರ್ಧನೆಯಂಥ ಕ್ರಮಗಳ ಮೂಲಕ ರೈತ ಸಮುದಾಯದ ಹಿತ ಕಾಪಾಡಬೇಕಾದ ಎಫ್‌ಪಿಒ ವಲಯ, ಹಲವು ಸವಾಲುಗಳನ್ನು ಎದುರಿಸುತ್ತ ಏದುಸಿರು ಬಿಡುತ್ತಿದೆ. ವೃತ್ತಿಪರ ನಿಪುಣರಿಂದ ನಿರ್ವಹಣೆಯಾಗಿ, ಸಫಲ ದಾರಿಯಲ್ಲಿ ನಡೆಯುತ್ತಿರುವ ಕೆಲ 'ರೈತ ಕಂಪನಿ'ಗಳು ಕರ್ನಾಟಕದಲ್ಲೇ ಇವೆ. ಬಂಡವಾಳ ಕೊರತೆ, ತೆರಿಗೆ, ಶುಲ್ಕ, ಸೆಸ್ ಎಂಬ ಚಕ್ರವ್ಯೂಹದಲ್ಲಿ ಸಿಲುಕಿರುವ ರೈತ ಕಂಪನಿಗಳನ್ನು ಯಶಸ್ಸಿನ ಹಾದಿಯಲ್ಲಿ ಮುನ್ನಡೆಸಲು ಸರ್ಕಾರಗಳು ಮುಂದಾಗದೇ ಹೋದರೆ, ಈ ಎಫ್‌ಪಿಒಗಳು ಬಂಡವಾಳಶಾಹಿ ತಿಮಿಂಗಿಲಗಳಿಗೆ ಆಹಾರ ಆಗುವುದರಲ್ಲಿ ಸಂಶಯವೇ ಇಲ್ಲ!

Prajayavani pg 07

ಅಣು ಶಕ್ತಿ ಬಳಕೆಯಿಂದ ಸಾಸಿವೆ-ಎಳ್ಳು ಇಳುವರಿ ಹೆಚ್ಚಳ!

ಧಾರವಾಡ ಕೃಷಿ ವಿವಿಯ ಮೊದಲ ಪ್ರಯೋಗ ಯಶಸ್ವಿ | ಶೇ.35ರಷ್ಟು ಹಿಗ್ಗಿದ ಸಾಸಿವೆ ಇಳುವರಿ, ಶೇ.15 ಹೆಚ್ಚಳ ಕಂಡ ಎಳ್ಳು ಇಳುವರಿ

■ ಬಸವರಾಜ್ ಹೊಂಗಲ್

ಉದಯವಾಣಿ ಸಮಾಚಾರ

ಧಾರವಾಡ: ಅಣುಶಕ್ತಿಯಿಂದ ವಿದ್ಯುತ್ ಉತ್ಪಾದನೆ ಹೆಚ್ಚಿಸಿದ್ದು ಹಳೆಯ ವಿಚಾರ. ಆದರೆ, ಅದೇ ಅಣುಶಕ್ತಿ ಬಳಸಿಕೊಂಡು ಕೃಷಿ ಉತ್ಪಾದನೆ ಹೆಚ್ಚಿಸುವ ಧಾರವಾಡ ಕೃಷಿ ವಿಶ್ವವಿದ್ಯಾಲಯದ ಪ್ರಯೋಗ ಯಶಸ್ವಿಯಾಗಿದೆ.

ಹೌದು, ಬಾಹ್ಯಾಕಾಶಕ್ಕೆ ಹೆಸರು ಕಾಳು, ಮೆಂತ್ಯೆ ಕಾಳು ಕಳುಹಿಸಿ ಇಡೀ ವಿಶ್ವದ ಗಮನ ಸೆಳೆದಿರುವ ದೇಶದ ಟಾಪ್ 10 ವಿವಿಗಳ ಪಟ್ಟಿಯಲ್ಲಿರುವ ಧಾರವಾಡ ಕೃಷಿ ವಿವಿ, ಇದೀಗ ಅಣುಶಕ್ತಿಯನ್ನು ಕೃಷಿ ಉತ್ಪಾದನೆ ಹೆಚ್ಚಿಸಲು ಬಳಸಿಕೊಳ್ಳುವ ಪ್ರಯೋಗದಲ್ಲಿ ಗಮನ ಸೆಳೆದಿದೆ.


2025ರಲ್ಲಿ ಮುಂಬೈ ಬಳಿಯ ಬಾಬಾ ಅಟೋಮಿಕ್ ರಿಸರ್ಚ್ ಸೆಂಟರ್(ಬಿಎಆರ್‌ಸಿ) ಜತೆ ಒಪ್ಪಂದ ಮಾಡಿಕೊಂಡು ಕೃಷಿ ಉತ್ಪಾದನೆಯಲ್ಲಿ ಅಣುಶಕ್ತಿ ಬಳಸಿಕೊಳ್ಳುವ ಪ್ರಯೋಗಕ್ಕೆ ಕೈ ಹಾಕಿತ್ತು. ಇದರನ್ವಯ ಸಾಸಿವೆ ಮತ್ತು ಎಳ್ಳು ಬೆಳೆಗಳ ಮೇಲೆ ಮೊದಲ ಪ್ರಯೋಗ ನಡೆಸಿ ವಿಜ್ಞಾನಿಗಳು ಯಶ ಕಂಡಿದ್ದಾರೆ.

ಏನಿದು ಅಣು-ಕೃಷಿ ಪ್ರಯೋಗ?: ಪ್ರಚಂಡ ಶಕ್ತಿಯಾಗಿರುವ ಅಣುಶಕ್ತಿಯ ವಿಕಿರಣಗಳನ್ನು ಬಳಸಿಕೊಂಡು ಬೀಜಗಳನ್ನು ಹೈಟೆಕ್ ಮಾದರಿಯಲ್ಲಿ ಸಂಸ್ಕರಣೆ ಮಾಡಿ ಬಿತ್ತನೆ ಬೀಜಗಳಲ್ಲಿ ಅಡಗಿರುವ ಕೀಟಗಳನ್ನು ಸಂಪೂರ್ಣ ನಾಶಪಡಿಸಲಾಗುತ್ತದೆ. ಇದರಿಂದ ಬೀಜಗಳಲ್ಲಿ ಮೊಳಕೆ ಶಕ್ತಿ ಹೆಚ್ಚಿ, ಬೆಳೆಗಳಲ್ಲಿ ಕೀಟಬಾಧೆ ಕಡಿಮೆಯಾಗಿ ಇಳುವರಿ ಹೆಚ್ಚಳವಾಗುತ್ತದೆ. ಅಲ್ಲದೆ, ಬೆಳೆಯುವ ಅವಧಿ ಕೂಡ ಕಡಿಮೆಯಾಗಿದ್ದು, ಇವು ರೋಗ ನಿರೋಧಕತೆ ಮತ್ತು ಬರ ನಿರೋಧಕ ಅಂಶಗಳೊಂದಿಗೆ ವಿನೂತನ ತಳಿಗಳಾಗಿ ರೈತರ ಹೊಲಕ್ಕೆ ಹೋಗಲು ಸಜ್ಜಾಗಿವೆ.

ಪ್ರಯೋಗ ಯಶಸ್ಸಿ: ಅಣು-ಕೃಷಿ ವಿಜ್ಞಾನಿಗಳಾದ ಡಾ. ಭುವನೇಶಗೌಡ ಪಾಟೀಲ್ ಸಾಸಿವೆ (ಟಿಡಿಎಂ-305) ಮೇಲೆ ಪ್ರಯೋಗ ಮಾಡಿದ್ದರೆ, ಡಾ. ಆನಿನಾ ನಿಂಬಾಳ ಎಳ್ಳು ಬೆಳೆ ಮೇಲೆ ಅಣು ವಿಕಿರಣ ಪ್ರಯೋಗ ಮಾಡಿ ಯಶಸ್ವಿಯಾಗಿದ್ದಾರೆ. ಹಾಗೂ ಯೋಜನಾ ಬದ್ಧವಾಗಿ ಬಿತ್ತನೆ, ಪೋಷಣೆ ಮತ್ತು ಒಕ್ಕಲು ಮಾಡಲಾಗುವುದು. ಇದೇ ಮೇಲೆ ಸಾಮಾನ್ಯ ಬೀಜ ಮತ್ತು ಅಣು ವಿಕಿರಣ ಸಂಸ್ಕರಣೆ ಬೀಜಗಳ ಇಳುವರಿ ಮತ್ತು ಜೀವಸತ್ವದಲ್ಲಾಗಿರುವ ಬದಲಾವಣೆ ಗುರುತಿಸುವುದೇ ಈ ಪ್ರಯೋಗ.

ಇದರಲ್ಲಿ ಉತ್ತರ ಕರ್ನಾಟಕದ ಪ್ರಮುಖ ಬೆಳೆಗಳಾದ ಜೋಳ, ಗೋಧಿ, ಅಲಸಂದಿ, ಶೇಂಗಾ, ಹೆಸರು, ಉದ್ದು, ಸೋಯಾ ಸೇರಿ ಅನೇಕ ಧಾನ್ಯಗಳನ್ನು ಪ್ರಯೋಗಕ್ಕೊಳಪಡಿಸಲಾಗುತ್ತಿದೆ. ಈ ಪೈಕಿ ಕೃಷಿ ವಿವಿಯ ತಂಡ ಸಾಸಿವೆ ಮತ್ತು ಎಳ್ಳನ್ನು ಆಯ್ಕೆ ಮಾಡಿಕೊಂಡು ಬಿತ್ತನೆ ಮಾಡಿತ್ತು. ಇದರಲ್ಲಿ ಶೇ.30-35 ಇಳುವರಿ ಪ್ರಮಾಣ ಅಧಿಕಗೊಂಡಿದೆ. ಆಲ್ಲದೇ, ಬೆಳೆಯುವ ಅವಧಿ ಕೂಡ ಕಡಿಮೆಯಾಗಿದ್ದು, ಇವು ರೋಗ ನಿರೋಧಕತೆ ಮತ್ತು ಬರ ನಿರೋಧಕ ಅಂಶಗಳೊಂದಿಗೆ ವಿನೂತನ ತಳಿಗಳಾಗಿ ರೈತರ ಹೊಲಕ್ಕೆ ಹೋಗಲು ಸಜ್ಜಾಗಿವೆ.

- ಅಣು ಜೀವಿ ಗೊಬ್ಬರ ಉತ್ಪಾದನೆಗೂ ಅಣುಶಕ್ತಿ ಬಳಕೆ
- ಕೀಟಗಳ ಸಂತಾನ ಶಕ್ತಿ ಹರಣಕ್ಕೂ ಅಣು ವಿಕಿರಣ ಸಹಾಯ
- ಬಹಳ ದಿನ ಧಾನ್ಯಗಳು ಕೆಡದಂತೆ ಇಡಲು ಅಣುಶಕ್ತಿ ಅನುಕೂಲ
- ಬಾಹ್ಯಾಕಾಶ ಕೃಷಿಗೂ ಈ ಪ್ರಯೋಗದಿಂದ ಸಹಕಾರಿ
- ಜೋಳ ಸೇರಿ 25 ಬೆಳೆಗಳ ಮೇಲೆ ಪ್ರಯೋಗಕ್ಕೆ ಸಿದ್ಧತೆ
- ಇನ್ನಷ್ಟು ಪ್ರಯೋಗಕ್ಕೆ ಪೀಠವೇ ವಿಜ್ಞಾನಿಗಳ ಸಿದ್ಧತೆ





> ಕೃಷಿಯಲ್ಲಿ ಅಣುಶಕ್ತಿ ಬಳಕೆ ಇದೀಗ ಅಗತ್ಯ. ಹವಾಮಾನ ವೈಪರೀತ್ಯ, ಕೀಟಗಳ ಕಾಟ, ಅಕಾಲಿಕ ಮಳೆ ಸೇರಿ ವಿವಿಧ ಸವಾಲು ಗೆಲ್ಲಲು ಅಣು ವಿಕಿರಣ ಸಂಸ್ಕರಿತ ಬೀಜಗಳ ಬಳಕೆ ಸೂಕ್ತವಾಗಿದೆ.
> • ಡಾ. ಪ್ರಕಾಶ್ ನಾಗಬೊವನಹಳ್ಳಿ.
> ಕುಲಪತಿ, ಕೃಷಿ ವಿವಿ, ಧಾರವಾಡ

ಅಣುಶಕ್ತಿ ಅನುಕೂಲತೆಗಳೇನು?

ದೇಶದ ಕೆಲವೆಡೆ ಈಗಾಗಲೇ ಬಾಬಾ ಅಟೋಮಿಕ್ ಎನರ್ಜಿ ಸೆಂಟರ್‌ಅಣು ವಿಕಿರಣ ಸಂಸ್ಕರಿಸಿದ ತಳಿಗಳನ್ನು ವಿತರಿಸಿದೆ. ಈ ವಿಕಿರಣ ಸಂಸ್ಕರಣೆಗೊಳಗಾದ ತಳಿಗಳು ಹೆಚ್ಚು ರೋಗ ನಿರೋಧಕತೆ, ಬರ ನಿರೋಧಕತೆ ಮತ್ತು ಕಡಿಮೆ ಅವಧಿ ಹೆಚ್ಚು ಇಳುವರಿ ನೀಡುತ್ತಿವೆ. ಅಷ್ಟೇಯಲ್ಲ, ವಿದೇಶಗಳಿಗೆ ರಫ್ತು ಮಾಡಲು ಅನುಕೂಲವಿದ್ದು, ವರ್ಷಗಟ್ಟಲೆ ಇವು ಕೆಡುವುದಿಲ್ಲ. ಕಡಿಮೆ ನಿರ್ವಹಣೆ ವೆಚ್ಚ, ಅಧಿಕ ಲಾಭ ಸಾಧ್ಯವಿದೆ. ಇದೀಗ ವಾಣಿಜ್ಯ ಬೆಳೆಗಳ ಬೆನ್ನು ಬಿದ್ದಿರುವ ರೈತರಿಗೆ ಆಹಾರ ಬೆಳೆಗಳು ಲಾಭದಾಯಕವಾಗಿ ಬೆಳೆಯಲು ಅಣುಶಕ್ತಿ ಪ್ರಯೋಗ ಸಹಾಯಕ್ಕೆ ಬರುತ್ತದೆ ಎನ್ನುತ್ತಾರೆ ಕೃಷಿ ಮತ್ತು ಅಣು ವಿಜ್ಞಾನಿಗಳು. ಅಣು ಜೀವಿ ಗೊಬ್ಬರ ಉತ್ಪಾದನೆಗೂ ಅಣುಶಕ್ತಿ ಬಳಸಲಾಗುತ್ತದೆ. ಕೀಟಗಳ ಸಂತಾನ ಶಕ್ತಿ ಹರಣಕ್ಕೂ ಅಣು ವಿಕಿರಣ ಸಹಾಯವಾಗುತ್ತದೆ. ಬಹಳ ದಿನ ಧಾನ್ಯಗಳು ಕೆಡದಂತೆ ಇಡಲು ಅಣುಶಕ್ತಿ ಅನುಕೂಲ ಎಂಬುದು ಸಾಬೀತಾಗಿದೆ. ಬಾಹ್ಯಾಕಾಶ ಕೃಷಿಗೂ ಈ ಪ್ರಯೋಗದಿಂದ ಬಲ ಬಂದಂತಾಗಿದೆ. ಜೋಳ ಸೇರಿ 25 ಬೆಳೆಗಳ ಮೇಲೆ ಪ್ರಯೋಗಕ್ಕೆ ಸಿದ್ಧತೆ ನಡೆದಿದೆ.

Udayavani Pg 08

Dec Hrd Pg 04

The Bengaluru-based company is targeting Rs 2,000 crore in revenues in the next three years; plans to go for IPO in November 2027

Idli-dosa batter to global fresh food: iD Fresh's next big menu

MAHESH KULKARNI & HRITHIK KIRAN BAGADE
BENGALURU, DHNS

ST RTUP STARS

What began as a humble pouch of idli-dosa batter in Bengaluru is now shaping up into a global fresh-food ambition. After building its batter and paratha brands across India, iD Fresh Food [iD Fresh Food (India) Pvt Ltd] is preparing for its next big leap—deeper into smaller Indian markets, wider product categories and manufacturing hubs overseas.

The company sees idli and dosa not just as quintessentially Indian foods, but as the starting point for a global fresh-food business. With plans to add 10,000 stores over the next 18 months, launch roughly one new product every month, take its fresh batter range to markets including the US, Canada and Europe, and go for an IPO in November 2027, iD Fresh is targeting Rs 2,000 crore in revenue within three years.

iD Fresh currently sells through around 60,000 outlets in India and employs about 2,000 people. It has five manufacturing plants, with major facilities in Bengaluru, Hyderabad, Mumbai and Delhi, besides a smaller unit in Visakhapatnam.

The company is now looking to deepen its presence in smaller markets. It plans to add 10,000 stores over the next 18 months across existing and new markets, while also expanding its presence on e-commerce platforms.

The strategy is not just about putting more products on more shelves. iD is stepping up innovation, with plans to launch around one SKU every month. It currently has about 50 SKUs, spanning batter, parathas, chapatis, chutneys and sambar.

Recent launches include protein chapati, while protein-rich idli and dosa batter are already part of its portfolio. The company has also begun testing namkeens in select stores and plans to scale them gradually.

"Before sending any product to the market, I give a sample to my parents and my kids for testing," says PC Musthafa, Co-founder, Chairman and Global CEO, iD Fresh Food.

The company expects its product expansion and deeper distribution to support its growth, which has averaged around 25% CAGR in recent years.

More factories, more capacity

Manufacturing capacity is being expanded alongside the distribution network. iD has finalised the location for its largest factory in Mumbai and plans to invest Rs 35-40 crore in the facility. The plant is expected to be ready within a year and could eventually generate around Rs 500 crore in annual revenue.

The company is also setting up a factory in Dubai at an investment of Rs 25 crore. For smaller international markets, it plans to establish manufacturing hubs requiring less than $1 million each, with around 10 hubs planned.

"We are a profitable business. We are a cash-rich company. We are not looking at any primary infusion of capital. We should be able to fund our expansion from our own internal accruals," Musthafa says.

Taking batter and parathas global

International expansion is a key part of iD's next phase. The company is already a strong player in the GCC, while its frozen products are available in the US, UK, Singapore and China.


It plans to introduce its fresh batter range in the US, Canada, Europe and Sri Lanka over the next two years. South Africa, Mauritius and Japan are also being evaluated.

In the US, iD is looking at 4-5 manufacturing hubs, including a large facility in New York that would serve surrounding markets. The GCC is also emerging as a market for taking Indian parathas beyond the Indian diaspora. A study conducted by the company in Saudi Arabia found that around 60% of its customers there are Arabs.

"Arabs love lachcha parathas. Peri-peri paratha is loved there," Musthafa says. The company plans to introduce speciality varieties such as zaatar paratha in GCC markets. "Globalising parathas is our opportunity," he adds.

Technology at the core

For a fresh-food business with a shelf life of only 3-7 days, controlling wastage is crucial. Musthafa says distribution is the company's biggest strength, with technology playing a central role in managing it. iD has brought down wastage from around 25% in its early years to less than 3% globally and below 1% for batter in Bengaluru.



Left to right: Jafar, Shamsudeen, Abdul Nazer, PC Musthafa and Noushad

QUICK FACTS

Founded: 2005

Co-founders: PC Musthafa, Noushad Td, Shamsudeen Tk, Abdul Nazer, and Jafar Tk

Funds raised $126 million

Initial capital: Rs 50,000

Investors: Premji Invest, Helion Venture Partners, and NewQuest Capital Partners

Revenue: Rs 681 crore in FY25

The company tracks store- and product-level sales and wastage, while using geo-tagging, route optimisation and geo-fencing. It is also using AI to forecast inventory across factories, distribution centres, vehicles and stores. "There is no iD without IT. iD runs on IT," Musthafa says.

The company has deliberately stayed with fresh food without preservatives, making distribution and inventory management even more critical.

IPO on the horizon

As the company scales, iD Fresh has begun preparing for an IPO targeted for November 2027. According to Musthafa, the proposed issue will primarily be a secondary sale by existing investors, with no fresh capital expected to come into the company.

The immediate goal is to reach Rs 2,000 crore in revenue within three years, backed by strong EBITDA growth. For Musthafa, however, the longer-term ambition is larger than revenue or market share: to build an Indian fresh-food company with a global footprint.

"By the time we celebrate our silver jubilee, we want to build the cleanest food company from India for the world," he concludes.